ಗೊತ್ತಿರುವ ಹಾಗೆ ಪಂಪಕವಿಯು ತನ್ನ 'ವಿಕ್ರಮಾರ್ಜುನ ವಿಜಯ' ಕಾವ್ಯದ ನಾಯಕ ಅರ್ಜುನನನ್ನು ಆಶ್ರಯದಾತ ರಾಜ ಅರಿಕೇಸರಿಗೆ ಹೋಲಿಸಿ ಬರೆದಿದ್ದಾನೆ. ಆದರೆ, ಇಡೀ ಕಾವ್ಯದಲ್ಲಿ ಪ್ರತಿನಾಯಕ ಕರ್ಣನೇ ಮುಖ್ಯವಾಗುತ್ತಾನೆ. 'ಕರ್ಣರಸಾಯನಮಲ್ತೆ ಭಾರತಂ' ಎಂದಿದ್ದಾನೆ. ಆಸ್ಥಾನದಲ್ಲಿದ್ದೂ ಆಶ್ರಯದಾತ ರಾಜನಿಗೆ ವಿರುದ್ಧವಾದ ಸೃಜನಶೀಲ ಪ್ರತಿನಾಯಕತ್ವದ ನಿರೂಪಣೆ ಮಾಡುತ್ತಾನೆ. ಈ ವಿವೇಕ ನಮಗಿರಬೇಕು.

ಜೊತೆಗೆ, ಪಂಪಕವಿಯು ತನ್ನ ಕಾವ್ಯ ವಸ್ತುಗಳನ್ನು ವಿಂಗಡಿಸಿಕೊಂಡ ವಿಧಾನದಲ್ಲೂ ನನಗೊಂದು ಹೊಳಹು ಕಾಣಿಸುತ್ತಿದೆ. 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ' ಎಂದ ಪಂಪ ಲೌಕಿಕಕ್ಕೆ ರಾಜಕಾರಣ ಕೇಂದ್ರಿತ ಮಹಾಭಾರತ ವಸ್ತುವನ್ನೂ, ಜಿನಾಗಮಕ್ಕೆ ತನ್ನ ಜೈನಧರ್ಮದ ವಸ್ತುವನ್ನೂ ಆಯ್ಕೆ ಮಾಡಿಕೊಳ್ಳುವ ವಿಧಾನದಲ್ಲೇ ರಾಜಕಾರಣ ಮತ್ತು ಧರ್ಮವನ್ನು ಪ್ರತ್ಯೇಕವಾಗಿ ಇಡುವ ವಿವೇಕವೊಂದು ಕೆಲಸ ಮಾಡಿದೆ. ಪ್ರಭುತ್ವದ ಜೊತೆಗಿದ್ದೂ ಪ್ರಭುತ್ವದಾಚೆಗೆ ನೋಡುವ, ಧರ್ಮದೊಳಗಿದ್ದೂ ಧರ್ಮದಾಚೆಗೆ ಬಂದು 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವ ಪಂಪನ ವಿವೇಕ ಇಂದಿಗೂ ಒಂದು ಪ್ರತೀಕವೇ ಸರಿ. ಇನ್ನು ಬಸವಣ್ಣನವರು ಪ್ರಭುತ್ವದ ಜೊತೆಗಿದ್ದೂ ಮಹತ್ವದ ಸಮಾಜೋಧಾರ್ಮಿಕ ಚಳವಳಿಯನ್ನು ಕಟ್ಟಿದವರು. ಚಳವಳಿಯ ಪ್ರಜ್ಞೆಯನ್ನು ಸಾಮುದಾಯಿಕವಾಗಿ ವಿಸ್ತರಿಸಿ ಸಾಮಾಜಿಕ ಸಮಾನತೆಯನ್ನು ಸಾರಿದವರು. ಧರ್ಮ ಮತ್ತು ದೇವರಿಗೆ ವಿಶೇಷ ಆಯಾಮದ ಅರ್ಥ ನೀಡಿದರು. 'ದೇಹವೇ ದೇಗುಲ' ಎನ್ನುವ ಮೂಲಕ ದೇವಸ್ಥಾನವೆಂಬ ಸಾಂಸ್ಥಿಕತೆಗೆ ಎದುರಾಗಿ ನಿಂತರು. 'ಶರಣ ಸತಿ ಲಿಂಗ ಪತಿ' ಎನ್ನುವ ಮೂಲಕ ಭಕ್ತಿಯೆಂಬುದು ಖಾಸಗಿ ಭಾವವೆಂಬ ತತ್ವವನ್ನು ಬಿತ್ತಿ ಬೆಳೆದರು. ಧರ್ಮ, ದೇವರು, ಮಂದಿರ, ಮಸೀದಿ, ಚರ್ಚುಗಳ ಹೆಸರಲ್ಲಿ ಇಂದು ನಡೆಯುತ್ತಿರುವ ಅನಾರೋಗ್ಯಕರ ವಿದ್ಯಮಾನಗಳ ನಡುವೆ ಬಸವಣ್ಣನವರು ಹೇಳುವ ವಿಚಾರಗಳು ತುಂಬಾ ಪ್ರಸ್ತುತವಾಗಿವೆ. ಇದೇ ವಚನ ಚಳವಳಿಯಲ್ಲಿ ಅಲ್ಲಮರಂತಹ ತತ್ವಜ್ಞಾನಿ ವಿಮರ್ಶಕರು ಇದ್ದದ್ದು ಮಹತ್ವದ ಅಂಶ.

ಒಬ್ಬ ಸಾಹಿತಿ ಹಾಗೂ ಸಾಂಸ್ಕೃತಿಕ ಕ್ಷೇತ್ರದ ವ್ಯಕ್ತಿಯಾಗಿ ನನಗೆ ಪಂಪ ಮತ್ತು ಬಸವಣ್ಣನವರು ನಿರ್ವಹಿಸಿದ ಮತ್ತು ನಿರೂಪಿಸಿದ ಪ್ರಭುತ್ವ ಸಂಬಂಧಾಂತರದ ಪ್ರತಿಪಾದನೆ ಒಂದು ವಾಸ್ತವಿಕ ಮಾದರಿ ಎನ್ನಿಸಿದೆ. ಇನ್ನೂ ಸ್ಪಷ್ಟವಾಗಿ ಹೇಳೋದಾದರೆ ನಾನು ಎಡಪಂಥೀಯ ಚಿಂತನೆಯಿಂದ ಪ್ರಭಾವಿತನಾದವನು. ಆದರೆ, ಯಾವತ್ತೂ ಜಡಪಂಥೀಯ ಅಲ್ಲ; ಸದಾ ಜನಪಂಥೀಯ.


### ವಿಕ್ರಂ ವಿಸಾಜಿ

ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು. ಮೂಲತಃ ಬೀದರ ಜಿಲ್ಲೆಯ ಭಾಲ್ಕಿಯವರಾದ ವಿಕ್ರಂ, ಕಲಬುರ್ಗಿಯ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. 'ತಮಾಷಾ', 'ಗ್ರೀಕ್ ಹೊಸ ಕಾವ್ಯ', 'ರಕ್ತ ವಿಲಾಪ', 'ಬಿಸಿಲ ಕಾಡಿನ ಹಣ್ಣು', 'ರಸಗಂಗಾಧರ', 'ಮತ್ತೆ ಬಂತು ಶ್ರಾವಣ', 'ನಾದಗಳು ನುಡಿಯಾಗಲೇ', 'ಪರ್ವದ ಭಾವಾವಳಿ', 'ಸಿಮೊನ್ ದ ಬೋವಾ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ.